# IN THE COURT OF THE ADDL. SENIOR CIVIL JUDGE & JMFC., GUBBI

## OS – 306/2024

Witness recalled and duly sworn on : 23.08.2025.

Cross Examination: by Counsel for Defendant No.1 to 3. :

ನಾನು SSLC ಯವರೆಗೆ ಓದಿದ್ದೇನೆ. ನಾನು ಪತ್ರೆಮತ್ತಿಘಟದಲ್ಲಿ ವಾಸ ಇದ್ದೇನೆ. ನಾನು ವ್ಯವಸಾಯ ಕೆಲಸ ಮಾಡುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿದ್ದೇನೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದೆ. 1 ನೇ ಪ್ರತಿವಾದಿ ಪಾರ್ವತಮ್ಮನವರ ಮೈದುನನಾದ ರಾಮಯ್ಯ ನನ್ನ ತಂದೆ ಎಂದರೆ ಸರಿ. ವಾದಿ ಗೀತಾ ಮತ್ತು 2 ನೇ ಪ್ರತಿವಾದಿ ರಮೇಶ್ ನನ್ನ ಅಕ್ಕ ತಮ್ಮ ಎಂದರೆ ಸರಿ. ನನಗೆ 1 ನೇ ಪ್ರತಿವಾದಿಯ ಜೊತೆ ಮನಸ್ಥಾಪ ಇದೆ ಎಂದರೆ ಸರಿಯಲ್ಲ. ನಾವಿಬ್ಬರು ಮಾತನಾಡುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಇಬ್ಬರ ನಡುವೆ ಗಲಾಟೆ ಆಗಿದ್ದ ಕಾರಣ ಬಹಳ ವರ್ಷಗಳಿಂದ ನಾವು ಮಾತನಾಡುತ್ತಿಲ್ಲ ಎಂದರೆ ಸರಿ ಆದರೆ ನನ್ನ ಸಾಕ್ಷಿ ಪ್ರಮಾಣ ಪತ್ರದ ವಿಚಾರಗಳು ಸತ್ಯವಾಗಿರುತ್ತದೆ.

ಬಸಪ್ಪನವರು ಗೀತಾ ರವರ ಮದುವೆ ಹಾಗೂ ಅವರನ್ನು ನೋಡಿಕೊಳ್ಳಲು ಬಹಳಷ್ಟು ಕೈ ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಜಮೀನುಗಳನ್ನು ಅಭಿವೃದ್ಧಿ ಪಡಿಸಲು ಸಾಕಷ್ಟು ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲವನ್ನು 1 ಮತ್ತು 2 ನೇ ಪ್ರತಿವಾದಿಗಳು ತೀರಿಸಿದ್ದಾರೆಂದರೆ ಅವರ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಯಲ್ಲಿ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ಅವುಗಳ ಚಕ್ಕುಬಂದಿ ನನಗೆ ಗೊತ್ತಿದೆ. ಪಿತ್ರಾರ್ಜಿತ ಸ್ವತ್ತುಗಳು ವಿಭಾಗ ಆಗಿದ್ದರು ಸಹ ನಾನು ಸುಳ್ಳು

ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬಸಪ್ಪನವರ ಜೀವಿತ ಕಾಲದಲ್ಲಿ ಹಾಗೂ ಅವರ ಮರಣದ ನಂತರ ಅವರ ಮನೆಯಲ್ಲಿ ನಡೆದಿರುವ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿದೆ.

**Re-examination-Nil.**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi